ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 4, January- February 2025, Pp. 57-72
©*IIMRD*, Mysuru

IIMRD JOURNALS
www.iimrd.com

# ಭಾರತದಲ್ಲಿ ಶೈಕ್ಷಣಿಕ ರೇಡಿಯೋ ಪ್ರಯೋಗಗಳು ಮತ್ತು ಕಾರ್ಯಕ್ರಮಗಳು: ಒಂದು ಅಧ್ಯಯನ

**ಡಾ. ಸೌಮ್ಯ ಕೆ.ಬಿ.**
ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

**ಸಾರಾಂಶ: (Abstract)**

*ದೇಶದ ಆರ್ಥಿಕ, ಭೌಗೋಳಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಅಪಾರ ವ್ಯಾಪ್ತಿ ಹೊಂದಿರುವ ಎಲ್ಲರ ಕೈಗೆಟುಕಬಲ್ಲ ರೇಡಿಯೋ ಮಾತ್ರ ನಿಜವಾದ ಅರ್ಥದಲ್ಲಿ ಜನ ಮಾಧ್ಯಮವಾಗಿದೆ. ಶೇ. 99ರಷ್ಟು ಜನರನ್ನು ಕ್ಷಣಾರ್ಧದಲ್ಲಿ ತಲುಪುವ ಸಾಮರ್ಥ್ಯ ಹೊಂದಿದೆ. ಶಿಕ್ಷಣ, ಮಾಹಿತಿ ಮತ್ತು ಮನರಂಜನೆ ನೀಡುವ ಗುರುತರ ಜವಾಬ್ದಾರಿ ಹೊಂದಿರುವ ಆಕಾಶವಾಣಿ ಇಂದಿಗೂ ನಮ್ಮ ದೇಶದಲ್ಲಷ್ಟೇ ಅಲ್ಲದೇ, ವಿಶ್ವದಲ್ಲಿಯೇ ಸಾರ್ವಜನಿಕ ಸೇವಾ ಪ್ರಸಾರಕ್ಕೆ ಮೀಸಲಾದ ಬೃಹತ್ ಪ್ರಸಾರ ಜಾಲವಾಗಿದೆ. ದೇಶದಲ್ಲಿ ಇಂದಿಗೂ ಶೇ. 35ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದು, ಶೇ. 77ರಷ್ಟು ಜನರ ದಿನದ ಆದಾಯ 20 ರೂಪಾಯಿಗಿಂತ ಕಡಿಮೆ ಇದೆ. ಶೇ. 35ಕ್ಕಿಂತ ಹೆಚ್ಚು ಜನ ಅನಕ್ಷರಸ್ಥರಾಗಿದ್ದಾರೆ ಎಂಬುದನ್ನು ಗಮನಿಸಿದಾಗ, ಭಾರತದಂತಹ ಅಭಿವೃದ್ಧಿ ಶೀಲ ದೇಶದಲ್ಲಿ ಶೈಕ್ಷಣಿಕ ರೇಡಿಯೋ ಅವಶ್ಯಕ ಮಾತ್ರವಲ್ಲದೇ, ಅನಿವಾರ್ಯ ಕೂಡ ಎಂಬುದು ತಿಳಿಯುತ್ತದೆ. ಆಕಾಶವಾಣಿ ಅನೌಪಚಾರಿಕ ಹಾಗೂ ಔಪಚಾರಿಕ ಶಿಕ್ಷಣ ನೀಡುವಲ್ಲಿ ಪ್ರಧಾನ ಪಾತ್ರವಹಿಸುತ್ತಿದೆ. ಇದನ್ನು ಜಗತ್ತಿನ ದೂರದ ಸ್ಥಳಗಳಿಗೆ ಪ್ರಸಕ್ತ ವಿದ್ಯಮಾನಗಳನ್ನು ಪ್ರಸಾರ ಮಾಡಲೂ ಬಳಸಲಾಗುತ್ತಿದೆ. ಮನರಂಜನೆಯನ್ನು ನೀಡುವ ಪ್ರಮುಖ ಮಾಧ್ಯಮವೂ ಆಗಿದೆ. ಆದ್ದರಿಂದ ರೇಡಿಯೋ ಬಹುದೊಡ್ಡ ಮನರಂಜನಾ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಶಾಲಾ ಪ್ರಸಾರದ ಮೂಲಕ ವಿಜ್ಞಾನದ ಭಾಗ, ಸಾಮಾಜಿಕ ಅಧ್ಯಯನ, ಕಲೆ, ಸಂಗೀತ, ಭಾಷೆ, ರಾಜಕೀಯ, ಪ್ರಚಲಿತ ವಿದ್ಯಮಾನಗಳು ಮತ್ತು ಇತರ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸುತ್ತದೆ.*

**ಮುಖ್ಯಪದಗಳು (Keywords):** ಭಾರತ, ಶಿಕ್ಷಣ, ಶೈಕ್ಷಣಿಕ ರೇಡಿಯೋ, ಪ್ರಯೋಗ, ಆಕಾಶವಾಣಿ.

## ಪೀಠಿಕೆ

ರೇಡಿಯೋ ಒಂದು ಸಮೂಹ ಮಾಧ್ಯಮವಾಗಿ ಕೇವಲ ಮಾಹಿತಿ ಮತ್ತು ಮನರಂಜನೆಯನ್ನು ಮಾತ್ರ ನೀಡುವುದಲ್ಲದೇ, ಶಿಕ್ಷಣವನ್ನು ನೀಡುವ ಕೆಲಸವನ್ನು ಮಾಡುತ್ತಿದೆ. ರೇಡಿಯೋ ಆವಿಷ್ಕಾರವಾದ ಸ್ವಲ್ಪ ವರ್ಷಗಳ ನಂತರ ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಲಾಯಿತು. ಪ್ರಾಥಮಿಕ, ಮಾಧ್ಯಮಿಕ ಮತ್ತು ದೂರ ಶಿಕ್ಷಣ ವ್ಯವಸ್ಥೆಯಲ್ಲೂ ರೇಡಿಯೋ ಔಪಚಾರಿಕವಾಗಿ ಮತ್ತು ಅನೌಪಚಾರಿಕವಾಗಿ ಶಿಕ್ಷಣ ಮಾಧ್ಯಮವಾಗಿ ಯಶಸ್ವಿಯಾಯಿತು. ಆಧುನಿಕ ತಂತ್ರಜ್ಞಾನಗಳು ಬೆಳವಣಿಗೆಯಾಗಿರುವ ಈ ದಿನಗಳಲ್ಲೂ

*Please cite this article as:* ಸೌಮ್ಯ ಕೆ.ಬಿ. (2025). ಭಾರತದಲ್ಲಿ ಶೈಕ್ಷಣಿಕ ರೇಡಿಯೋ ಪ್ರಯೋಗಗಳು ಮತ್ತು ಕಾರ್ಯಕ್ರಮಗಳು: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(4). ಪು.ಸಂ.* 57–72

ರೇಡಿಯೋವನ್ನು ಹಿಂದುಳಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶೈಕ್ಷಣಿಕ ಮಾಧ್ಯಮವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಜಾಗತಿಕವಾಗಿ ರೇಡಿಯೋ ಇತಿಹಾಸವನ್ನು ನೋಡಿದಾಗ, ಪ್ರಥಮ ಬಾರಿಗೆ ಬ್ರಿಟಿಷ್ ಬ್ರಾಡ್ಕಾಸ್ಟಿಂಗ್ ಕಾರ್ಪೋರೇಷನ್ (ಬಿಬಿಸಿ) 1920ರಲ್ಲಿ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಪ್ರಾರಂಭಿಸಿತು.

1922ರಲ್ಲಿ ಬ್ರಿಟನ್ನಲ್ಲಿ ನಿಯಮಿತವಾಗಿ ಶಾಲಾ ಪ್ರಸಾರವನ್ನು ಪ್ರಾರಂಭಿಸಲಾಯಿತು. 1983ರ ವೇಳೆಗೆ ಶೈಕ್ಷಣಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಹಳೆಯ ಶಾಲಾ ಪ್ರಸಾರ ಕಾರ್ಯಕ್ರಮಗಳು ಕ್ಯಾಸೆಟ್ ರೂಪದಲ್ಲಿ ದೊರೆಯಲಾರಂಭಿಸಿತು. 1990ರ ವೇಳೆಗೆ ಹಗಲಿನ ಶಾಲಾ ರೇಡಿಯೋ ಪ್ರಸಾರವು ಅವನತಿಯ ಅಂಚಿಗೆ ಬರಲಾರಂಭಿಸಿತು. 1996ರ ವೇಳೆಗೆ ಎಲ್ಲಾ ಶಾಲಾ ರೇಡಿಯೋ ಪ್ರಸಾರ ಅಂತರ್ಜಾಲದಲ್ಲಿ ಲಭ್ಯವಾಗತೊಡಗಿತು. ರೇಡಿಯೋ ಭಾರತಕ್ಕೆ ಬಂದು ನಾಲ್ಕು ವರ್ಷಗಳ ನಂತರ ಅಂದರೆ 1927ರಿಂದ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಯಿತು.

ಭಾರತದಲ್ಲಿ ರೇಡಿಯೋ ಕೇವಲ ಶಾಲಾ ಪ್ರಸಾರಕ್ಕೆ ಸೀಮಿತವಾಗಿರಲಿಲ್ಲ. ಗ್ರಾಮೀಣ ಅಭಿವೃದ್ಧಿ, ಕೃಷಿ, ಮಹಿಳೆಯರ ಸಬಲೀಕರಣ, ಆರೋಗ್ಯ ಜಾಗೃತಿ, ಸ್ವಚ್ಛತೆ ಅಭಿಯಾನ ಹೀಗೆ ನಾನಾ ಉದ್ದೇಶಗಳನ್ನು ಒಳಗೊಂಡಂತೆ ಶಿಕ್ಷಣ ನೀಡುವ ಕೆಲಸ ಮಾಡಲಾಯಿತು. ದೇಶದಲ್ಲಿ ಸ್ವಾತಂತ್ರ್ಯ ಬಂದಿರದ ಆ ಕಾಲದಲ್ಲಿ ರೇಡಿಯೋ ಬ್ರಿಟಿಷರ ಆಳ್ವಿಕೆಯಲ್ಲಿಯೇ ನಿಯಂತ್ರಿಸಲ್ಪಡುತ್ತಿತ್ತು. ದೀರ್ಘ ಸಮಯದವರೆಗೆ ದೇಶಾದ್ಯಂತ ಜನಸಾಮಾನ್ಯರನ್ನು ತಲುಪಿದ ಮಾಧ್ಯಮ ಇದಾಗಿದೆ. ಅಲ್ಲದೇ ರೇಡಿಯೋದ ಶೈಕ್ಷಣಿಕ ಪಾತ್ರವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಯಿತು. ಆಲ್ ಇಂಡಿಯಾ ರೇಡಿಯೋ ಸರ್ಕಾರಿ ಸ್ವಾಮ್ಯದಲ್ಲಿದ್ದ ಕಾರಣ ಇಡೀ ದೇಶಕ್ಕೆ ವ್ಯಾಪಕವಾಗಿ ಹರಡಲು ಅವಕಾಶವಾಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದ ಅವಧಿಯಲ್ಲಿ ರೇಡಿಯೋವನ್ನು ಅಭಿವೃದ್ಧಿ ಚಟುವಟಿಕೆಯ ಮಾಧ್ಯಮವನ್ನಾಗಿ ಬಳಸಿಕೊಳ್ಳಲಾಯಿತು.

ಶೈಕ್ಷಣಿಕ ರೇಡಿಯೋ ಪ್ರಸಾರದಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಅಂಶಗಳೂ ಇದ್ದು, ಪ್ರತಿ ಕಾರ್ಯಕ್ರಮದಲ್ಲೂ ಕೇಳುಗರಿಗೆ ಶಿಕ್ಷಣದ ಉದ್ದೇಶವನ್ನು ಅಥವಾ ಸಂದೇಶವನ್ನು ತಲುಪಿಸುವುದೇ ಆಗಿತ್ತು (ಜೆ ಕೆ ದಾಸ್). ಶಾಲೆ ಬಿಟ್ಟ ಮಕ್ಕಳಿಗೆ, ನವ ಸಾಕ್ಷರರಿಗೆ, ಅನಕ್ಷರಸ್ಥ ವಯಸ್ಕರು, ರೈತರು ಮುಂತಾದವರಿಗೆ ಅನೌಪಚಾರಿಕವಾಗಿ ಶೈಕ್ಷಣಿಕ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತದೆ. ಅದೇ ರೀತಿ ಔಪಚಾರಿಕ ಶಿಕ್ಷಣ ಪ್ರಸಾರವನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾಡಲಾಗುತ್ತದೆ. ಹೀಗೆ ಭಾರತದಲ್ಲಿ ಶೈಕ್ಷಣಿಕ ಪ್ರಸಾರವನ್ನು ಅನೌಪಚಾರಿಕವಾಗಿ 1929ರ ಜನವರಿಯಿಂದ ಮುಂಬೈಯಲ್ಲಿ ಪ್ರಾರಂಭಿಸಲಾಯಿತು.

**ಶೈಕ್ಷಣಿಕ ರೇಡಿಯೋ ಪ್ರಾಮುಖ್ಯತೆ**

ಇಂದು ಜಗತ್ತಿನಾದ್ಯಂತ ಮಾಹಿತಿ ಮತ್ತು ಜನಸಂಖ್ಯಾ ಸ್ಫೋಟ ಬಹುದೊಡ್ಡ ಸಮಸ್ಯೆಯಾಗಿ ಬೆಳೆಯುತ್ತಿದೆ. ಮಾಹಿತಿ ಸ್ಫೋಟ ಎಂದರೆ ಜ್ಞಾನದ ಸ್ಫೋಟ ಎಂದರ್ಥ. ಇಂದು ವಿಶ್ವದಾದ್ಯಂತ ಸಾಮಾಜಿಕ ಮತ್ತು ತಾಂತ್ರಿಕ ಬದಲಾವಣೆಗಳ ಫಲವಾಗಿ ಮಾಹಿತಿ ಜಗತ್ತಿನೆಲ್ಲೆಡೆ ವೇಗವಾಗಿ ವಿಸ್ತರಿಸುತ್ತಿದೆ. ಜ್ಞಾನದ

ಹೊಸ ಗಡಿ ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಇದರಿಂದ ಮಾನವನ ಗ್ರಹಿಕೆಯನ್ನೂ ವಿಸ್ತರಿಸುವಂತೆ ಮಾಡುತ್ತಿದೆ. ಮತ್ತೊಂದೆಡೆ ಜ್ಞಾನದ ಸ್ಫೋಟದ ಜೊತೆ ಜನಸಂಖ್ಯಾ ಸ್ಫೋಟದಿಂದಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಶಿಕ್ಷಣದ ಪ್ರಜಾಪ್ರಭುತ್ವದಿಂದಾಗಿ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರೇರಣೆ ಮತ್ತು ಮಹತ್ವಾಕಾಂಕ್ಷೆಯ ಮಟ್ಟವೂ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳ ಜ್ಞಾನದಾಹವನ್ನು ನೀಗಿಸುವ ನಿಟ್ಟಿನಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ದಾಂಗುಡಿಯಿಡುತ್ತವೆ. ಶೈಕ್ಷಣಿಕ ಅವಶ್ಯಕತೆ ಅಭಿವೃದ್ಧಿ ರಾಷ್ಟ್ರಗಳಿಗಿಂತ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಹಾಗಾಗಿ ಜಗತ್ತಿನಾದ್ಯಂತ ಮಾಹಿತಿ ಸ್ಫೋಟ ಮತ್ತು ಜನಸಂಖ್ಯಾ ಸ್ಫೋಟ ಒಂದು ದೊಡ್ಡ ಸಮಸ್ಯೆಯಾಗಿ ಕಾಡಲಾರಂಭಿಸಿದೆ (ಜಡ್. ಖಾನ್).

ಶೈಕ್ಷಣಿಕ ಪ್ರಸಾರದ ಪ್ರಾಮುಖ್ಯತೆಯನ್ನು ಹೇಳುತ್ತಾ ಆಲ್ ಇಂಡಿಯಾ ರೇಡಿಯೋದ ಪ್ರಥಮ ಕಂಟ್ರೋಲರ್ ಆಗಿದ್ದ ಲಿಯೋನಲ್ ಫೀಲ್ಡನ್ "ಕಾಲಾಂತರದಲ್ಲಿ ಆಲ್ ಇಂಡಿಯಾ ರೇಡಿಯೋದ ಶೈಕ್ಷಣಿಕ ಪ್ರಸಾರದ ಪ್ರಯೋಜನವನ್ನು ಬಹುಸಂಖ್ಯಾತರು ಬಳಕೆ ಮಾಡಿಕೊಳ್ಳುವರು" ಎಂಬುದಾಗಿ ಹೇಳುತ್ತಾನೆ. ಇಂದಿಗೆ ಆಕಾಶವಾಣಿಯ ಶೈಕ್ಷಣಿಕ ಪ್ರಸಾರವನ್ನು ಬಹುಸಂಖ್ಯಾತರು ಬಳಕೆ ಮಾಡಿಕೊಳ್ಳುತ್ತಿರುವುದನ್ನು ಗಮನಿಸಬಹುದು (ಸಿ. ಯು. ಬೆಳ್ಳಕ್ಕಿ, 2015). ಫೀಲ್ಡನ್ನ ಈ ಮಾತುಗಳು ಶೈಕ್ಷಣಿಕ ರೇಡಿಯೋದ ಪ್ರಾಮುಖ್ಯತೆಯನ್ನು ಹೇಳುತ್ತದೆ.

ಮಾಧ್ಯಮಗಳು ಜ್ಞಾನೇಂದ್ರಿಯಗಳನ್ನು ಸಕ್ರಿಯವಾಗಿ ಪ್ರತಿಕ್ರಿಯಿಸಲು ಪ್ರಚೋದಿಸುತ್ತದೆ. ಒಂದು ಕೊಠಡಿಯಲ್ಲಿ, ಸಮೂಹ ಮಾಧ್ಯಮಗಳನ್ನು ಬೋಧನಾ ಪ್ರಕ್ರಿಯೆಯ ಒಂದು ಭಾಗವಾಗಿ ಪರಿಚಯಿಸುವುದರಿಂದ ಕಲಿಕಾ ಪ್ರಕ್ರಿಯೆಯನ್ನು ಸುಧಾರಿಸಲು ಸಹಾಯವಾಗುತ್ತದೆ. ಆದ್ದರಿಂದ ಗುಣಮಟ್ಟದ ಶಿಕ್ಷಣವನ್ನು ಕಡಿಮೆ ಶಿಕ್ಷಕರಿಂದ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ ನೀಡುವ ಉದ್ದೇಶದಿಂದ ಸಮೂಹ ಮಾಧ್ಯಮಗಳಲ್ಲಿ ಬಳಕೆ ಮಾಡಲಾಗುತ್ತಿದೆ. ಆದ್ದರಿಂದ ಶಿಕ್ಷಣದಲ್ಲಿ ಸಮೂಹ ಮಾಧ್ಯಮ ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ಮಾಧ್ಯಮವಾಗಿ ಸಮೂಹ ಮಾಧ್ಯಮದ ಪ್ರಾಮುಖ್ಯತೆಯನ್ನು ಈ ಕೆಳಕಂಡಂತೆ ಗುರುತಿಸಬಹುದು.

1. ಸಮೂಹ ಮಾಧ್ಯಮ ಕಡಿಮೆ ಸಮಯದಲ್ಲಿ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ.
2. ಇದು ಜಗತ್ತಿನ ಯಾವುದೇ ಘಟನೆ ಕುರಿತಾಗಿ ಮಾಹಿತಿ ನೀಡುವ ಮೂಲಕ ಜ್ಞಾನದ ವ್ಯಾಪ್ತಿಯನ್ನು ವಿಸ್ತೃತಗೊಳಿಸುತ್ತದೆ.
3. ಈ ಮಾಧ್ಯಮಗಳು ಸುಲಭವಾಗಿ ಮನುಷ್ಯರ ವರ್ತನೆಗಳು ಮತ್ತು ಸಂಬಂಧಗಳ ಮೇಲೆ ಪರಿಣಾಮಕಾರಿ ಪ್ರಭಾವ ಬೀರಿ, ಮಾಧ್ಯಮದಲ್ಲಿ ನೋಡಿರುವುದನ್ನು/ಕೇಳಿರುವುದನ್ನು ಅನುಕರಿಸಲು ಅವಕಾಶ ನೀಡುತ್ತವೆ.
4. ದೂರದ ಸ್ಥಳಗಳನ್ನೂ ಏಕಕಾಲದಲ್ಲಿ ತಲುಪುವುದರಿಂದ ದೂರ ಶಿಕ್ಷಣಕ್ಕೂ ಅವಕಾಶ ಒದಗಿಸುತ್ತದೆ.
5. ಸಮೂಹ ಮಾಧ್ಯಮ ಸಾಮಾಜಿಕ ಬದಲಾವಣೆಯ ಒಂದು ಸಂಸ್ಥೆಯಂತೆ ವರ್ತಿಸುತ್ತದೆ.

6. ಸಮೂಹ ಮಾಧ್ಯಮ, ಸಾಮಾಜಿಕ ಸಂಪರ್ಕವನ್ನು ಬಲಪಡಿಸುವ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ.
7. ಮಕ್ಕಳಿಗೆ ವಿಷಯಗಳನ್ನು ಸ್ಪಷ್ಟವಾಗಿ ವಿಷಯವನ್ನು ತಿಳಿಸಲು ಮತ್ತು ಸರಿಯಾದ ಜ್ಞಾನ ಪ್ರಸಾರ ಮಾಡುವಲ್ಲಿ ನೆರವಾಗುತ್ತದೆ. ವಿಚಾರಗಳನ್ನು ಸರಳಗೊಳಿಸಿ, ಸ್ಪಷ್ಟವಾದ ವಿವರಣೆ ನೀಡಲು ಸಹಾಯ ಮಾಡುತ್ತದೆ.
8. ಸಮೂಹ ಮಾಧ್ಯಮ ಸೂಚನೆಗಳನ್ನು ನೀಡುವ ಮೂಲಕ ಕಲಿಕೆಯಲ್ಲಿ ಆಸಕ್ತಿ ಮೂಡಿಸುವ ಜೊತೆಗೆ ವಿಷಯದ ಕುರಿತು ಕುತೂಹಲ ಮೂಡಿಸುತ್ತದೆ.

ಶಿಕ್ಷಣ ಇಂದು ಹಿಂದೆಂದಿಗಿಂತಲೂ ಹೆಚ್ಚು ಜವಾಬ್ದಾರಿಯುತವಾಗಿದ್ದು, ಶಿಕ್ಷಣದ ಉದ್ದೇಶವನ್ನು ವಿಶ್ವದ ಬೇಡಿಕೆಗೆ ತಕ್ಕಂತೆ ಪೂರೈಸುವ ಅಗತ್ಯಕ್ಕಾಗಿ ಪ್ರತಿದಿನ ಬದಲಾವಣೆಗೊಳ್ಳುತ್ತಿದೆ. ಸಮಕಾಲೀನ ಶಿಕ್ಷಣ ಇಂದು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪರಿಣಾಮವಾಗಿ ಪತ್ರಿಕೆ, ದೂರದರ್ಶನ, ರೇಡಿಯೋಗಳು ಹೆಚ್ಚಿದಂತೆಲ್ಲಾ ಇವುಗಳ ಪಾತ್ರವೂ ವ್ಯಕ್ತಿಯ ಜೀವನದಲ್ಲಿ ಹೆಚ್ಚಾಗಿದೆ.

**ಸಂಶೋಧನಾ ವಿಧಾನ ಮತ್ತು ಪ್ರಾಮುಖ್ಯತೆ**

ಭಾರತದಲ್ಲಿ ಶೈಕ್ಷಣಿಕ ರೇಡಿಯೋ ಪ್ರಯೋಗಗಳು ಮತ್ತು ಕಾರ್ಯಕ್ರಮ ಕುರಿತಾದ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳ ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಯನಕ್ಕೆ ಗುಣಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಮಾಧ್ಯಮಿಕ ಮೂಲಗಳು ಎಂದರೆ ಸಂಶೋಧನಾ ಲೇಖನಗಳು, ಗ್ರಂಥಗಳು, ನಿಯತಕಾಲಿಕ, ಪ್ರಕಟಿತ ಪತ್ರಿಕಾ ಲೇಖನಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ರೇಡಿಯೋ ಈಗಾಗಲೇ ಪ್ರಪಂಚದಾದ್ಯಂತ ಶೈಕ್ಷಣಿಕ ಮಾಧ್ಯಮ ಎಂದೇ ಗುರುತಿಸಲಾಗಿದೆ. ಔಪಚಾರಿಕ ಅಥವಾ ಅನೌಪಚಾರಿಕವಾದ ಕಲಿಕಾ ಮಾಧ್ಯಮ ರೇಡಿಯೋ ಎಂಬುದು ಹಲವು ಸಂಶೋಧನೆಗಳಿಂದ ಸಾಬೀತಾಗಿದೆ. ರೇಡಿಯೋವನ್ನು ಶೈಕ್ಷಣಿಕ ವಲಯದಲ್ಲಿ ಮಾಹಿತಿ ಹಂಚುವ, ನಿರ್ದೇಶನ ಕೊಡುವ ಮತ್ತು ಮನೋರಂಜನೆ ನೀಡುವ ಪ್ರಭಾವಿ ಮಾಧ್ಯಮವೆಂದೇ ಗುರುತಿಸಲಾಗುತ್ತದೆ. ಒಂದು ಸಣ್ಣ ರೇಡಿಯೋ ಇಡೀ ಪ್ರಪಂಚಕ್ಕೆ ಸಂದೇಶ ರವಾನೆ ಮಾಡುವ ಸಾಮರ್ಥ್ಯ ಹೊಂದಿದೆ. ಇದು ಒಬ್ಬ ವ್ಯಕ್ತಿಯಿಂದ ಹಿಡಿದು ಕೋಟ್ಯಾಂತರ ಜನರನ್ನು ಏಕಕಾಲದಲ್ಲಿ ತಲುಪುವುದರಿಂದಲೇ ರೇಡಿಯೋವನ್ನು ಔಪಚಾರಿಕ ಮತ್ತು ಅನೌಪಚಾರಿಕ ಶೈಕ್ಷಣಿಕ ಮಾಧ್ಯಮವಾಗಿ ಬಳಸಿಕೊಳ್ಳಲಾಗುತ್ತಿದೆ. ಹಾಗಾಗಿ ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಭಾವಿ ಮಾಧ್ಯಮವೆನಿಸಿದೆ. ಇದರಿಂದಾಗಿ ರೇಡಿಯೋವನ್ನು ಮನಸ್ಸಿನ ವೇದಿಕೆ ಅಥವಾ ಕುರುಡು ಪ್ರದರ್ಶನ ಶಾಲೆ ಎಂದು ಹೇಳುವುದು. ಶಿಕ್ಷಣ ಕ್ಷೇತ್ರದಲ್ಲಿ ರಚನಾತ್ಮಕ ಬದಲಾವಣೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಮಟ್ಟ ಹೆಚ್ಚು ಮಾಡುವ ಉದ್ದೇಶದಿಂದ ರೇಡಿಯೋ ಬಳಕೆ ಮಾಡುತ್ತಿರುವುದನ್ನು ಜಗತ್ತಿನಾದ್ಯಂತ ಕಾಣಬಹುದು ಹಾಗೂ ಇದರ ಪ್ರಭಾವವನ್ನೂ ಗುರುತಿಸಬಹುದು. ಈ ನಿಟ್ಟಿನಲ್ಲಿ ಭಾರತದಲ್ಲಿ ಕೇವಲ ಶೈಕ್ಷಣಿಕ ಮಾಧ್ಯಮವಾಗಿ ಮಾತ್ರವಲ್ಲದೇ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಕೃಷಿ, ಮಹಿಳಾ ಸಬಲೀಕರಣದಂತಹ ಕ್ಷೇತ್ರಗಳಲ್ಲೂ ಸಶಕ್ತವಾಗಿ ಬಳಕೆ ಮಾಡಿಕೊಳ್ಳಲಾಯಿತು. ಶೈಕ್ಷಣಿಕ ಮಾಧ್ಯಮವನ್ನಾಗಿ

ಬಳಕೆ ಮಾಡಿಕೊಳ್ಳುವ ಮೂಲಕ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ನೀಡುವಲ್ಲಿ ಭಾರತದ ರೇಡಿಯೋ ಪ್ರಯೋಗಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಭಾರತದಲ್ಲಿ ಮಹತ್ವದ ಶೈಕ್ಷಣಿಕ ರೇಡಿಯೋ ಪ್ರಯೋಗ ಮತ್ತು ಕಾರ್ಯಕ್ರಮಗಳು**

ದೇಶದ ಮೆಟ್ರೋ ಮತ್ತಿತರ ಕೇಂದ್ರಗಳಿಂದ ಶಾಲಾ ಮಕ್ಕಳಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿದೆ. ಮಕ್ಕಳು ಈ ಕಾರ್ಯಕ್ರಮದ ಲಾಭ ಪಡೆಯಲೆಂದು ಶಾಲೆಗಳಿಗೆ ರೇಡಿಯೋ ಸೆಟ್ಟಗಳನ್ನೂ ವಿತರಿಸಲಾಗುತ್ತಿದೆ. ರಾಷ್ಟ್ರದಲ್ಲಿ ಶೇ. 40ಕ್ಕೂ ಹೆಚ್ಚು ಶಾಲೆಗಳಿಗೆ ಈ ಸೌಲಭ್ಯ ಒದಗಿಸಲಾಗಿದೆ. ನುರಿತ ಶಿಕ್ಷಕರೇ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಪ್ರಸಾರದ ಹೊಣೆ ಆಕಾಶವಾಣಿ ಕೇಂದ್ರದ್ದು. ಶಾಲಾ ಪಾಠ ಪ್ರವಚನಗಳೂ ಸೇರಿದಂತೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಶಿಕ್ಷಣ ತಜ್ಞರ ಸಮಿತಿ ರೂಪಿಸುತ್ತದೆ. ಈ ತಜ್ಞರ ಸಮಿತಿಗಳಲ್ಲಿ ರಾಜ್ಯ ಸರ್ಕಾರಗಳ ಶಿಕ್ಷಣ ಇಲಾಖೆ ಅಧಿಕಾರಿಗಳು, ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ಆಕಾಶವಾಣಿಯ ಅಧಿಕಾರಿಗಳು, ವಿಷಯ ತಜ್ಞರು ಇರುತ್ತಾರೆ. ಶಾಲಾ ಶಿಕ್ಷಕರು ಈ ಸಮಿತಿಗಳಲ್ಲಿ ಇರುವುದಿಲ್ಲವಾದರೂ ತಜ್ಞರಿಗೆ ನೆರವು ನೀಡುತ್ತಾರೆ. ಭಾರತದಲ್ಲಿ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮ ಮತ್ತು ಪ್ರಯೋಗಗಳು ಈ ಕೆಳಕಂಡಂತಿವೆ.

**ಶಾಲಾ ಪ್ರಸಾರ ಯೋಜನೆ–1937 (School Broadcast Project-1937)**

ಈ ಯೋಜನೆಯನ್ನು 1937ರಲ್ಲಿ ಶಾಲಾ ಮಕ್ಕಳಿಗಾಗಿ ಪ್ರಾರಂಭಿಸಲಾಯಿತು. ಇದು ದೆಹಲಿ, ಕಲ್ಕತ್ತಾ, ಮದ್ರಾಸ್ ಮತ್ತು ಬಾಂಬೆಗಳಿಂದ ಪ್ರಸಾರವಾಗುತ್ತಿತ್ತು. ಪ್ರಾರಂಭದಲ್ಲಿ ವ್ಯವಸ್ಥಿತವಾಗಿ ವಿದ್ಯಾಭ್ಯಾಸದ ಕ್ರಮವನ್ನು ಅನುಸರಿಸುತ್ತಿರಲಿಲ್ಲ. ಸಮಯ ಸಿಕ್ಕಾಗಲೆಲ್ಲಾ ಹೆಚ್ಚು ಅನುಭವಸ್ಥರನ್ನು ಬಳಸಿಕೊಂಡು ರೇಡಿಯೋ ಪ್ರಸಾರವನ್ನು ವಿದ್ಯಾಭ್ಯಾಸ ಕ್ರಮಕ್ಕೆ ಅಳವಡಿಸುವ ಪ್ರಯತ್ನ ಮಾಡಲಾಯಿತು. ರಾಜ್ಯಾದ್ಯಂತ ಸಾಮಾನ್ಯ ಪಠ್ಯಕ್ರಮ, ವೇಳಾಪಟ್ಟಿ ಇಲ್ಲದ ಕಾರಣ ಈ ಕಾರ್ಯಕ್ರಮ ತನ್ನ ಗುರಿ ತಲುಪುವಲ್ಲಿ ವಿಫಲವಾಯಿತು.

**ವಯಸ್ಕ ಶಿಕ್ಷಣ ಮತ್ತು ಸಮುದಾಯ ಅಭಿವೃದ್ಧಿ ಯೋಜನೆ–1956 (Adult Education and Community Development Project (Radio Forum)-1956)**

ಈ ಯೋಜನೆಯನ್ನು 1956ರಲ್ಲಿ, ಯುನೆಸ್ಕೋ ಸಂಸ್ಥೆಯ ಸಹಯೋಗದೊಂದಿಗೆ 144 ಗ್ರಾಮಗಳಿಗೆ ಪ್ರಸಾರ ಮಾಡಿತು. ಗ್ರಾಮೀಣ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಆರಂಭವಾದ ಕಾರ್ಯಕ್ರಮ, ಮಹಾರಾಷ್ಟ್ರದ ಪೂನಾದ ಸುತ್ತ–ಮುತ್ತಲಿನ ಹಳ್ಳಿಯ ಗ್ರಾಮಸ್ಥರನ್ನು ತಲುಪಿತು. ಇದಕ್ಕೆ "ರೇಡಿಯೋ ಚಾವಡಿ" ಎಂದೇ ಹೆಸರಿಸಲಾಗಿತ್ತು. ಯೋಜನೆ ಅತ್ಯಂತ ಯಶಸ್ವಿಯಾಗುವುದರ ಜೊತೆಗೆ ಸಾಕಷ್ಟು ಗ್ರಾಮಗಳು ಅಭಿವೃದ್ಧಿ ಹೊಂದಿದವು.

**ವಿಶ್ವವಿದ್ಯಾನಿಲಯ ಪ್ರಸಾರ ಯೋಜನೆ–1965 (University Broadcast Project-1965)**

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ 1965ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಸಮಾಜದ ವಿವಿಧ ಸ್ತರದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ವಿಸ್ತರಿಸುವ ಗುರಿಯೊಂದಿಗೆ ಸಾಮಾನ್ಯ ಮತ್ತು

ಸಮೃದ್ಧಿ ಎಂಬ ಎರಡು ಪ್ರಕಾರದ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಸಾಮಾನ್ಯ ಕಾರ್ಯಕ್ರಮವು ಸಾರ್ವಜನಿಕ ಹಿತಾಸಕ್ತಿಯನ್ನು, ಸಮೃದ್ಧಿ ಕಾರ್ಯಕ್ರಮವು ಅಂಚೆ ತೆರಪಿನ ಶಿಕ್ಷಣ ಸಂಸ್ಥೆ, ದೆಹಲಿ ವಿಶ್ವವಿದ್ಯಾನಿಲಯ, ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಇಂಗ್ಲಿಷ್, ಫಾರಿನ್ ಲಾಂಗ್ವೇಜಸ್ನ ಸಹಯೋಗದೊಂದಿಗೆ ಹೈದರಾಬಾದ್ ರೇಡಿಯೋ ಕೇಂದ್ರದ ಮೂಲಕ ಪ್ರಸಾರವಾಗುತ್ತಿತ್ತು.

**ಭಾಷಾ ಕಲಿಕಾ ಕಾರ್ಯಕ್ರಮ–1979 (Language Learning Programme-1979)**

ಈ ಕಾರ್ಯಕ್ರಮ "ರೇಡಿಯೋ ಚಾಲಿತ ಯೋಜನೆ"ಎಂದೇ ಪ್ರಸಿದ್ಧವಾಗಿದ್ದು, 1979–80ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ರಾಜಸ್ಥಾನ ಮತ್ತು ಆಕಾಶವಾಣಿಯ ಸಹಯೋಗದೊಂದಿಗೆ ಪ್ರಸಾರವಾಯಿತು. ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳಿಗೆ ಹಿಂದಿ ಕಲಿಸಬೇಕೆಂಬ ಉದ್ದೇಶದಿಂದ ಪ್ರಾರಂಭವಾಯಿತು. ಜೈಪುರ ಮತ್ತು ಅಜ್ಮೀರ್ ಜಿಲ್ಲೆಯ 500 ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಪ್ರಸಾರ ಮಾಡಿತು. ಈ ಯೋಜನೆ ವಿದ್ಯಾರ್ಥಿಗಳ ಶಬ್ದ ಸಂಪತ್ತನ್ನು ವೃದ್ಧಿಸುವಲ್ಲಿ ಸಫಲವಾಯಿತು. ಇದೇ ಕಾರ್ಯಕ್ರಮ ಮಧ್ಯಪ್ರದೇಶದ ಹೋಶಂಗಾಬಾದ್ನಲ್ಲಿ ಇದೇ ರೀತಿಯ, ಸ್ವಲ್ಪ ಮಾರ್ಪಾಡುಗಳೊಂದಿಗೆ ಪ್ರಸಾರವಾಯಿತು. ಆದರೆ ರಾಜಸ್ಥಾನದಷ್ಟು ಸಫಲತೆಯನ್ನು ಕಾಣಲಿಲ್ಲ.

**ಮೀನಾಳ ಜಗತ್ತು: ಮನರಂಜನಾತ್ಮಕ ಶೈಕ್ಷಣಿಕ ರೇಡಿಯೋ–1990 (Meena Communication Initiative–MCI)**

ಮೀನಾ ಜಗತ್ತು, ಮೀನಾ ಸಂವಹನ ನೇತೃತ್ವ (Meena Communication Initiative–MCI)ದ ಕಾರ್ಯಕ್ರಮವಾಗಿದ್ದು, 1990ರ ದಶಕದಲ್ಲಿ ಯುನಿಸೆಫ್ ವತಿಯಿಂದ ಪ್ರಾರಂಭವಾಯಿತು. ಇದೊಂದು ಸಮೂಹ ಸಂವಹನ ಯೋಜನೆಯಾಗಿದ್ದು, ಅಂತರ್ ವ್ಯಕ್ತಿ ಸಂವಹನ ಪ್ರಕ್ರಿಯೆಯಲ್ಲಿ ಹರಡಲ್ಪಟ್ಟ ಕಾರ್ಯಕ್ರಮ. ಜೊತೆಗೆ ಸಂಭಾಷಣೆ, ಸಾಮಾಜಿಕ ಸಂಪರ್ಕ, ಸಂವಾದ ಸ್ವರೂಪವನ್ನು ಒಳಗೊಂಡ ವೈವಿಧ್ಯಮಯ ಕಾರ್ಯಕ್ರಮ. ಇದನ್ನು ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಬಾರಿಗೆ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯ ಕುರಿತಾಗಿ ಪ್ರಯೋಗ ಮಾಡಲಾಯಿತು.

ಇದೇ ಪ್ರಯೋಗವನ್ನು ಭಾರತದ ಉತ್ತರ ಪ್ರದೇಶ ರಾಜ್ಯದಲ್ಲೂ ಯುನಿಸೆಫ್ ಮತ್ತು ಸರ್ಕಾರಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪ್ರಸಾರ ಮಾಡಲಾಯಿತು. ಈ ಕಾರ್ಯಕ್ರಮವನ್ನು 11–14ವರ್ಷ ವಯೋಮಾನದ 6 ರಿಂದ 8ನೇ ತರಗತಿಯ ಮಕ್ಕಳಿಗೆ ಪ್ರಸಾರ ಮಾಡಲಾಯಿತು. ಜನಪ್ರಿಯ ವ್ಯಂಗ್ಯಚಿತ್ರ ಪಾತ್ರವಾದ ಮೀನಾ ಮೂಲಕ ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣೆ, ಮಕ್ಕಳ ಸ್ನೇಹಿ ಶಾಲೆ, ಲಿಂಗ ತಾರತಮ್ಯ, ಸ್ವಚ್ಛತೆಯ ಶಿಕ್ಷಣ ಮುಂತಾದ ವಿಷಯಗಳ ಕುರಿತಾಗಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು. ಈ ಕುರಿತಾದ ಶೈಕ್ಷಣಿಕ ಪ್ರಸಾರಕ್ಕೆ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಲಾಗಿತ್ತು.

ಈ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಮಾರ್ಚ್ 2010ರಂದು ಪ್ರಸಾರ ಮಾಡಲಾಯಿತು. ಆರಂಭದಲ್ಲಿ ಉತ್ತರ ಪ್ರದೇಶದ ಲಲಿತ್ಪುರ ಮತ್ತು ಲಕ್ನೋ ಜಿಲ್ಲೆಯಲ್ಲಿ ಕೈಗೊಳ್ಳಲಾಯಿತು. ಇದಾದ ನಂತರ ಈ ಕಾರ್ಯಕ್ರಮ ಪ್ರಸಾರವನ್ನು ವಿವಿಧ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. 2011ರ ವೇಳೆಗೆ ಉತ್ತರ ಪ್ರದೇಶದ

9 ಜಿಲ್ಲೆಗಳ 25,400 ಶಾಲೆಗಳಿಗೆ ವಿಸ್ತರಿಸಲಾಯಿತು. 5,400 ಶಾಲೆಗಳಲ್ಲಿ 5,70,000 ವಿದ್ಯಾರ್ಥಿಗಳು ಮೀನಾ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮವನ್ನು ಕೇಳಿಸಿಕೊಂಡರು. ಮೀನಾ ಶೈಕ್ಷಣಿಕ ರೇಡಿಯೋ ಕಾರ್ಯಕ್ರಮದ ಮೌಲ್ಯಮಾಪನದಲ್ಲಿ ಕಾರ್ಯಕ್ರಮದ ಜನಪ್ರಿಯತೆಯ ಬಗ್ಗೆ ತಿಳಿಯಿತು. ಫಲಿತಾಂಶದ ಪ್ರಕಾರ ಈ ಕಾರ್ಯಕ್ರಮವು ಮಕ್ಕಳ ನಡತೆಯ ಮೇಲೆ ಪರಿಣಾಮ ಬೀರಿದುದಲ್ಲದೇ, ಜ್ಞಾನ ಪ್ರಸಾರ ಮತ್ತು ಜಾಗೃತಿ ಮೂಡಿಸುವ ಕೆಲಸ ಮಾಡಿತು. ಈ ಅನುಭವದ ಆಧಾರದ ಮೇಲೆ ಉತ್ತರ ಪ್ರದೇಶದ ಜೊತೆಗೆ ಹಿಂದಿ ಭಾಷೆ ಮಾತನಾಡುವ ಜಾರ್ಖಂಡ್, ಚತ್ತೀಸ್ಘರ್, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು.

ರೇಡಿಯೋ ಮೂಲಕ ನೀಡುವ ಶಿಕ್ಷಣ ಕಡಿಮೆ ಖರ್ಚಿನದ್ದಾಗಿದ್ದು, ಹೆಚ್ಚು ಪ್ರಭಾವ ಬೀರುವ ಸಂವಹನ ಮಾಧ್ಯಮವಾದ್ದರಿಂದ ಮಕ್ಕಳನ್ನು ಸುಲಭವಾಗಿ ತಲುಪುವಂತಾಯಿತು. ಈ ಕಾರ್ಯಕ್ರಮವನ್ನು ಮನರಂಜನಾತ್ಮಕ– ಶೈಕ್ಷಣಿಕ ಮಾದರಿಯಲ್ಲಿ ವಿನ್ಯಾಸಗೊಳಿಸಲಾಗಿತ್ತು. ಹಾಡು, ಕಥೆ ಮತ್ತು ನಾಟಕದ ರೂಪದಲ್ಲಿ ವಿವಿಧ ಪಾತ್ರಗಳ ಮೂಲಕ ಪ್ರಸ್ತುತ ಪಡಿಸಲಾಗುತ್ತಿತ್ತು. 15 ನಿಮಿಷಗಳ ಪ್ರಸಾರವಾಗಿದ್ದು, 160 ಸಂಚಿಕೆಗಳನ್ನು ಪ್ರಸಾರ ಮಾಡಲಾಯಿತು. 2010ರ ಮಾರ್ಚ್ನಲ್ಲಿ 30 ಸಂಚಿಕೆಗಳನ್ನು ಲಲಿತಪುರ ಮತ್ತು ಲಕ್ನೋನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಸಾರ ಮಾಡಿತು. ಅದೇ ವರ್ಷ ಆಗಸ್ಟ್ ತಿಂಗಳ ವೇಳೆಗೆ ಅಲಹಾಬಾದ್, ಜಾನ್ಪುರ, ಮಿರ್ಜಾಪುರ, ಭಡೋಯಿ, ಸೆಲಾನ್, ಭದ್ರಾಮ, ಮೊರಾದಾಬಾದ್ ಮತ್ತು ವಾರಣಾಸಿ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. 130 ಸಂಚಿಕೆಗಳನ್ನು ಎರಡನೇ ಹಂತದಲ್ಲಿ, ಒಂಭತ್ತು ಜಿಲ್ಲೆಗಳಲ್ಲಿ ಪ್ರಸಾರ ಮಾಡಿತು. ಮೀನಾ ಕಾರ್ಯಕ್ರಮವನ್ನು ಆಯಾ ಶಾಲಾ ವೇಳೆಗನುಗುಣವಾಗಿ ಪ್ರಸಾರ ಮಾಡಲಾಯಿತು. ಒಟ್ಟಾರೆಯಾಗಿ ಮೀನಾ ರೇಡಿಯೋ ಕಾರ್ಯಕ್ರಮವನ್ನು 5,400 ಶಾಲೆಗಳು ಹಾಗೂ 5,70,000 ವಿದ್ಯಾರ್ಥಿಗಳು ಕೇಳಿರುವುದು ಸಮೀಕ್ಷೆಯಿಂದ ಹೊರಬಂದ ಫಲಿತಾಂಶವಾಗಿದೆ (ಯುನಿಸೆಫ್, ಉತ್ತರ ಪ್ರದೇಶ ವರದಿ – 2011).

**ಇಗ್ನೋ–ರೇಡಿಯೋ ಪ್ರಸಾರ–1992 (IGNOU-AIR Broadcast-1992)**

ಮುಂಬೈ, ಹೈದರಾಬಾದ್ ಮತ್ತು ಶಿಲ್ಲಾಂಗ್ ಜೊತೆಗೂಡಿ ಇಂದಿರಾಗಾಂಧಿ ರಾಷ್ಟ್ರೀಯ ವಿಶ್ವವಿದ್ಯಾನಿಲಯ (ಇಗ್ನೊ) ರೇಡಿಯೋ ಕಾರ್ಯಕ್ರಮವನ್ನು 1992ರ ಜನವರಿಯಲ್ಲಿ ಪ್ರಾರಂಭಿಸಿತು. ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಗುರಿಯನ್ನಾಗಿಸಿಕೊಂಡು ಈ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತಿತ್ತು. ಶಿಲ್ಲಾಂಗ್ ಆರಂಭದಲ್ಲಿ ಪಾಲ್ಗೊಂಡಿತ್ತಾದರೂ ನಂತರದ ಅವಧಿಯಲ್ಲಿ ಹಿಂದಕ್ಕೆ ಸರಿಯಿತು. ಆದರೆ ಮುಂಬೈ ಇಂದಿಗೂ ಪ್ರತಿ ಗುರುವಾರ ಮತ್ತು ಶನಿವಾರ ಬೆಳಿಗ್ಗೆ 7.15ರಿಂದ 7.45ರವರೆಗೆ ಮತ್ತು ಹೈದರಾಬಾದ್ ಕೇಂದ್ರ ಪ್ರತಿ ಮಂಗಳವಾರ, ಗುರುವಾರ ಮತ್ತು ಶನಿವಾರ ಬೆಳಿಗ್ಗೆ 6ರಿಂದ 6.30ರ ಸಮಯದಲ್ಲಿ ಪ್ರಸಾರ ಮಾಡುತ್ತಿದೆ. ಈ ಕಾರ್ಯಕ್ರಮ ಇಂದಿಗೂ ಮೇಲಿನ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ.

**ಇಗ್ನೋ–ರೇಡಿಯೋ ಸಮಾಲೋಚನ ಯೋಜನೆ–1998 (IGNOU-AIR Interactive Radio Counseling (IRC)-1998)**

1998ರಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನೇ ಗುರಿಯನ್ನಾಗಿಸಿಕೊಂಡು ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಶಿಕ್ಷಣ ಸಂಸ್ಥೆ ಮತ್ತು ವಿದ್ಯಾರ್ಥಿಗಳ ನಡುವಿನ ಕಂದಕವನ್ನು ಕಡಿಮೆ ಮಾಡುವ ಸಲುವಾಗಿ ಹಾಗೂ ವಿಷಯದ ಕುರಿತಾಗಿ ಸಮಸ್ಯೆಗಳನ್ನು ಪರಿಹರಿಸಿ ಶೈಕ್ಷಣಿಕ ಸಮಾಲೋಚನೆ ನೀಡುವ ಸಲುವಾಗಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಇಗ್ನೋ ಮತ್ತು ಭೋಪಾಲ್ ಆಕಾಶವಾಣಿಯ ಸಹಯೋಗದೊಂದಿಗೆ 1998ರ ಮೇ ತಿಂಗಳಲ್ಲಿ ಒಂದು ವರ್ಷದ ಅವಧಿಗೆ ಪ್ರಾಯೋಗಿಕವಾಗಿ ಆರಂಭಿಸಲಾಯಿತು (ಶರ್ಮ, 2002). ಈ ಯೋಜನೆ ಯಶಸ್ವಿಯಾದ ನಂತರ ಎಂಟು ರೇಡಿಯೋ ಕೇಂದ್ರಗಳಿಗೆ ವಿಸ್ತರಿಸಲಾಯಿತು. (ಲಕ್ನೋ, ಪಾಟ್ನಾ, ಜೈಪುರ, ಶಿಮ್ಲಾ, ರ್‍ಹೋಟಕ್, ಜಲಂದರ್, ದೆಹಲಿ ಮತ್ತು ಜಮ್ಮು) ಇಂದಿಗೂ ಪ್ರತಿ ಭಾನುವಾರ ಸಂಜೆ 4 ರಿಂದ 5ರವರೆಗೆ ರೇಡಿಯೋ ಸಮಾಲೋಚನಾ ಕಾರ್ಯಕ್ರಮ 186 ಕೇಂದ್ರಗಳಿಂದ ಪ್ರಸಾರವಾಗುತ್ತಿದೆ.

**ಜ್ಞಾನವಾಣಿ–2001 (Gyana Vani Educational FM Radio Channel of India-2001)**

ಈ ಯೋಜನೆ 2001ರಲ್ಲಿ ಪ್ರಾರಂಭವಾಯಿತು. ಇದನ್ನು ಕೂಡ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ಆರಂಭಿಸಲಾಯಿತು. ಜ್ಞಾನವಾಣಿ ಭಾರತದ ಏಕೈಕ ಶೈಕ್ಷಣಿಕ ಎಫ್‌ಎಂ ರೇಡಿಯೋ ಕೇಂದ್ರವಾಗಿದೆ (ಶರ್ಮ, 2002). ಅಲಹಾಬಾದ್, ಬೆಂಗಳೂರು ಮತ್ತು ಕೊಯಂಬತ್ತೂರು ಎಫ್‌ಎಂ ರೇಡಿಯೋ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದನ್ನು 2002ರ ಜೂನ್ನಲ್ಲಿ ದೇಶದ 40 ಕೇಂದ್ರಗಳಿಗೆ ವಿಸ್ತರಿಸಲಾಯಿತು.

ಜ್ಞಾನವಾಣಿಗೆ ವಿವಿಧ ಶೈಕ್ಷಣಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಕೊಡುಗೆಯಾಗಿ ನೀಡುತ್ತಿದೆ. ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳಾದ ಇಗ್ನೋ, ಎನ್ಸಿಇಆರ್ಟಿ, ಯುಜಿಸಿ, ಐಐಟಿ, ಡಿಇಸಿ ಮುಂತಾದವುಗಳು ಜೊತೆಗೂಡಿ ಕಾರ್ಯಕ್ರಮ ರೂಪಿಸುವ ಹೊಣೆ ಹೊತ್ತಿವೆ. ಪ್ರತಿ ಎಫ್‌ಎಂ ರೇಡಿಯೋ ಕೇಂದ್ರಗಳೂ ನಗರದ ಸುತ್ತಮುತ್ತಲಿನ 60 ಕಿ.ಮೀ. ವ್ಯಾಪ್ತಿಗೆ ತಲುಪುವ ಸಾಮರ್ಥ್ಯವನ್ನು ಹೊಂದಿದೆ. ಇದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯ ಮಾಧ್ಯಮವಾಗಿ ಕೆಲಸ ನಿರ್ವಹಿಸುತ್ತಿದೆ (ಇಗ್ನೋ, 2001).

ಎಜುಸ್ಯಾಟ್–2004 (Educational Satelite EDUSAT-2004)

ಎಜುಸ್ಯಾಟ್ ಶಿಕ್ಷಣಕ್ಕೆಂದೇ ಮುಡಿಪಾಗಿಟ್ಟ ಮೊದಲ ಕೃತಕ ಉಪಗ್ರಹ. ಶಿಕ್ಷಣ ಕ್ಷೇತ್ರದಲ್ಲಿನ ಸಮಸ್ಯೆಗಳನ್ನು ನೀಗಿಸಲು ಅಂತರಿಕ್ಷ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಪ್ರಯೋಗಕ್ಕೆ ಭಾರತ ಮತ್ತೊಮ್ಮೆ ಮುಂದಾಯಿತು. 1960ರ ದಶಕದಲ್ಲೇ ಅಂತರಿಕ್ಷ ವಿಜ್ಞಾನಿ ಹಾಗೂ ದೂರದೃಷ್ಟಿಯುಳ್ಳ ಡಾ. ವಿಕ್ರಂ

ಸಾರಾಬಾಯಿ ರಾಷ್ಟ್ರೀಯ ಉಪಗ್ರಹ ಸಂವಹನ (ಓಂಖಅಔಒ)ವನ್ನು ಪ್ರಾರಂಭಿಸಲು ಪ್ರಯತ್ನಿಸಿದ್ದು, ಇದು ಇನ್ಸ್ಯಾಟ್ ಸ್ಥಾಪನೆಗೆ ಕಾರಣವಾಯಿತು. ಇವೆಲ್ಲದರ ಪ್ರಯತ್ನದಿಂದಾಗಿ ಭಾರತದಲ್ಲಿ 1975ರಲ್ಲಿ ಸ್ಯಾಟಲೈಟ್ ಇನ್ಸ್ಟಕ್ಷನಲ್ ಟೆಲಿವಿಷನ್ ಎಕ್ಸಪೆರಿಮೆಂಟ್ (ಖIಖಇ) ಉಪಗ್ರಹ ಶಿಕ್ಷಣ ಕಾರ್ಯಕ್ರಮ ನಡೆಯಲು ಕಾರಣವಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣ ಮಟ್ಟವನ್ನು ಹೆಚ್ಚಿಸುವುದು ಹಾಗೂ ಶಾಲಾ ಶಿಕ್ಷಣವನ್ನು ಸುಧಾರಿಸಲು ಶಿಕ್ಷಣ ತರಬೇತಿ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಇವೆಲ್ಲದರ ನಂತರ ಅಂತರಿಕ್ಷ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಪಡೆದ ಭಾರತ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಎಜುಸ್ಯಾಟ್ ಉಪಗ್ರಹವನ್ನು ಉಡಾಯಿಸಿತು. 2004ರ ಸೆಪ್ಟೆಂಬರ್ 20ರಂದು ಉಡಾವಣೆಗೊಂಡ ಎಜುಸ್ಯಾಟ್ ಭಾರತದಾದ್ಯಂತ ಶಿಕ್ಷಣವನ್ನು ನೀಡಲು ಪ್ರಾರಂಭಿಸಿತು.

### ಜ್ಞಾನವಾಣಿ ಮೈಸೂರು (Gyanvani Mysore)

ಕರ್ನಾಟಕದಲ್ಲಿ ಎರಡು ಜ್ಞಾನವಾಣಿ ಕೇಂದ್ರಗಳಿವೆ. ಒಂದು ಬೆಂಗಳೂರಿನಲ್ಲಿದ್ದರೆ; ಜ್ಞಾನವಾಣಿ ಮೈಸೂರು ಎಂದು ಕರೆಯುವ ಇನ್ನೊಂದು ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿದೆ. ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಕೇಂದ್ರದಲ್ಲಿ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ ಕಾರ್ಯಕ್ರಮಗಳು ಪ್ರಸಾರವಾಗುತ್ತಿತ್ತು. ಈ ಕಾರ್ಯಕ್ರಮಗಳು ಮರುದಿನ ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಮರುಪ್ರಸಾರಗೊಳ್ಳುತ್ತವೆ. "ದೂರ ಶಿಕ್ಷಣ ವ್ಯವಸ್ಥೆ"ಯಲ್ಲಿ ಅನುಭವ ಹೊಂದಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಾಪಕ ವೃಂದದವರಿಂದ, ಇತರೆ ವಿಶ್ವವಿದ್ಯಾನಿಲಯಗಳ ಮತ್ತು ಸಂಸ್ಥೆಗಳ ನುರಿತ ವಿಷಯ ತಜ್ಞರಿಂದ ವಿವಿಧ ಶಿಕ್ಷಣ ಕ್ರಮಗಳ ಪಠ್ಯಕ್ರಮಕ್ಕೆ ಸಂಬಂಧಿಸಿದ ಪಾಠಗಳನ್ನು ಮೈಸೂರು ಜ್ಞಾನವಾಣಿಯು ಎಫ್‌ಎಂ ಬ್ಯಾಂಡ್ನ 105.6 ಮೆಗಾಹರ್ಟ್ಸ್ ಕಂಪನಾಂಕದಲ್ಲಿ ಪ್ರಸಾರ ಮಾಡುತ್ತಿತ್ತು. 2014ರ ಅಕ್ಟೋಬರ್ನಿಂದ ಜ್ಞಾನವಾಣಿ ತನ್ನ ಪ್ರಸಾರವನ್ನು ನಿಲ್ಲಿಸಿತು (www.ksoumysore.edu.in retrieved on April 18, 2012).

### ಅಂತರ ಕ್ರಿಯಾತ್ಮಕ ರೇಡಿಯೋ ಕಾರ್ಯಕ್ರಮ (Interactive Radio Program)

ಶಿಕ್ಷಣ ಮಕ್ಕಳಿಗೆ ಜ್ಞಾನದ ಮೂಲಕ ವ್ಯಕ್ತಿತ್ವ ವಿಕಸನಗೊಳಿಸಲು ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಾಗಿದೆ. ಶಿಕ್ಷಣವನ್ನು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಎಂಬುದಾಗಿ ವಿಂಗಡಿಸಬಹುದು. ಔಪಚಾರಿಕ ಶಿಕ್ಷಣವೆಂದರೆ, ತರಗತಿಯಲ್ಲಿ ಮುಖಾ–ಮುಖಿ ಅಂತರ ಕ್ರಿಯಾತ್ಮಕ ಶಿಕ್ಷಣದ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಕಲಿಕೆಯಾಗಿದೆ. ಆದರೆ ಅನೌಪಚಾರಿಕ ಶಿಕ್ಷಣದಲ್ಲಿ ಔಪಚಾರಿಕ ತರಗತಿ ಮತ್ತು ಮುಖಾ–ಮುಖಿ ಬೋಧನೆ ಅಗತ್ಯವಿರುವುದಿಲ್ಲ. ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಶಿಕ್ಷಣದಲ್ಲೂ ಸಮೂಹ ಮಾಧ್ಯಮಗಳ ಬಳಕೆ ಹೆಚ್ಚಾಗುತ್ತಿದೆ. ಆ ಮೂಲಕ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಉನ್ನತೀಕರಿಸುವ ಕೆಲಸ ಮಾಡಲಾಗುತ್ತಿದೆ. ಭಾರತದಲ್ಲೂ ಕೂಡ ಅಂತರ ಕ್ರಿಯಾತ್ಮಕ ರೇಡಿಯೋ ಮೂಲಕ ವಿವಿಧ ರಾಜ್ಯಗಳಲ್ಲಿ ಇಂಗ್ಲಿಷ್ ಭಾಷಾ ಕಲಿಕಾ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು. ಅಂತರ ಕ್ರಿಯಾತ್ಮಕ ರೇಡಿಯೋ ಬೊಧನಾ ವಿಧಾನ ಪದ್ಧತಿ

ಬೇರೆ ರಾಷ್ಟ್ರಗಳಲ್ಲೂ ಯಶಸ್ವಿಯಾಯಿತು. ಶಾಲೆಗಳಲ್ಲಿ ಭಾಷೆ ಹೊರತಾಗಿಯೂ ಇತರೆ ವಿಷಯಗಳನ್ನು ಬೋಧಿಸಲಾಗುತ್ತಿದೆ. ರೇಡಿಯೋ ಪ್ರಸಾರದಲ್ಲಿ ವಿದ್ಯಾರ್ಥಿ ಸ್ನೇಹಿ ರೂಪಗಳಾದ ನಾಟಕ, ಹಾಡು, ಭಾಷಾ ಆಟ ಮುಂತಾದ ಚಟುವಟಿಕೆಗಳ ಮೂಲಕ ಬೋಧಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಕಲಿಕೆಯು ಆಸಕ್ತಿದಾಯಕ ಹಾಗೂ ಪರಿಣಾಮಕಾರಿಯಾಗಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಶಿಕ್ಷಣ ಅಭಿವೃದ್ಧಿ ಕೇಂದ್ರ, ಬೆಂಗಳೂರು ಅಂತರ ಕ್ರಿಯಾತ್ಮಕ ಶಿಕ್ಷಣ ಆಧಾರಿತ ಬೋಧನೆಯನ್ನು 2001–02ರಲ್ಲಿ ಮಹಾರಾಷ್ಟ್ರ, ಬಿಹಾರ, ಜಾರ್ಖಂಡ್, ಚತ್ತೀಸ್ಘರ್ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಪ್ರಥಮ ಹಂತದಲ್ಲಿ ಪರಿಚಯಿಸಿತು. 2008–09ರಲ್ಲಿ ರಾಜಸ್ಥಾನ ಮತ್ತು ಮಧ್ಯಪ್ರದೇಶಕ್ಕೂ ಇದನ್ನು ವಿಸ್ತರಿಸಲಾಯಿತು. ಮಹಾರಾಷ್ಟ್ರದಲ್ಲಿ 'ನಾವು ಇಂಗ್ಲಿಷ್ ಕಲಿಯೋಣ' (We Learn English), ಚತ್ತೀಸ್ಘರ್, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ ರಾಜ್ಯಗಳಲ್ಲಿ 'ಇಂಗ್ಲಿಷ್ ಇಸ್ ಫನ್' (English is Fun) ಕಾರ್ಯಕ್ರಮ ಸರಣಿಯನ್ನು ಪ್ರಸಾರ ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'ಚಿನ್ನರ ಚುಕ್ಕಿ' ರೇಡಿಯೋ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು.

**ಉಪಸಂಹಾರ**

ಭಾರತ ದೇಶ ಇಂದಿಗೂ ಅಭಿವೃದ್ಧಿ ಶೀಲ ರಾಷ್ಟ್ರವಾಗಿದ್ದರೂ ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ನಿಜಕ್ಕೂ ಮೆಚ್ಚಲೇಬೇಕು. ಭಾರತದಂತಹ ಅನೇಕ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ರೇಡಿಯೋ ಮಾಧ್ಯಮ ಒಂದು ವರದಾನ ಎಂದೇ ಹೇಳಬಹುದು. ರೇಡಿಯೋ ಮೂಲಕ ದೇಶದಲ್ಲಿ ಮಾಹಿತಿ, ಮನರಂಜನೆ ಮಾತ್ರವಲ್ಲದೇ ಶಿಕ್ಷಣವನ್ನು ನೀಡಲು ಸಾಧ್ಯ ಎಂಬುದನ್ನು ಈ ಮೇಲಿನ ಎಲ್ಲಾ ಶೈಕ್ಷಣಿಕ ರೇಡಿಯೋ ಪ್ರಸಾರ ಪ್ರಯೋಗಗಳು ಸಾಬೀತು ಪಡಿಸಿವೆ. ಆದರೆ ದುರಾದೃಷ್ಟವಶಾತ್ ಇಂದಿಗೆ ರೇಡಿಯೋ ತನ್ನ ಕೇಳುಗರ ಸಂಖ್ಯೆಯನ್ನು ಕಳೆದುಕೊಳ್ಳುತ್ತಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕಿದೆ. ಆದರೆ, ರೇಡಿಯೋ ಒಂದು ಮಾಧ್ಯಮವಾಗಿ ದೇಶದಲ್ಲಿ ಶೈಕ್ಷಣಿಕವಾಗಿ ಸಾಕಷ್ಟು ಮೈಲುಗಲ್ಲುಗಳನ್ನು ಸಾಧಿಸಲು ಸಾಧ್ಯವಿದೆ ಎಂಬುದನ್ನು ಈ ಮೇಲಿನ ಪ್ರಯೋಗಗಳೇ ಸಾಕ್ಷೀಕರಿಸಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸಾಕಷ್ಟು ಸವಾಲುಗಳಿದ್ದವು. ಅವುಗಳಲ್ಲಿ ಪ್ರಮುಖವಾದದ್ದು ಶಿಕ್ಷಣ. ಈ ಶಿಕ್ಷಣದ ಸವಾಲನ್ನು ಸಮರ್ಥವಾಗಿ ಎದುರಿಸುವಲ್ಲಿ ರೇಡಿಯೋ ಸಾಕಷ್ಟು ಸಹಕಾರ ನೀಡಿದೆ ಎಂಬುದರಲ್ಲಿ ಅನುಮಾನವಿಲ್ಲ. ಇಂದಿಗೂ ರೇಡಿಯೋವನ್ನು ಸಮರ್ಥವಾಗಿ ಬಳಸಿಕೊಂಡರೆ ಗ್ರಾಮೀಣ ಭಾಗದ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- Adam, G. Radio in Afghanistan: Socially Useful Communications in Wartime. Media and Global Change. Retrieved October 10, 2015, from bibliotecavirtual.clacso.org.ar/ar/liros/edicion/media/29chapter22.pdf

- Ahmad, S. K. Meaning Aims and Process of Education. Retrieved October 5, 2015, from http://sol.du.ac.in/courses/UG/StudyMaterial/16/Part1/ED/English/SM-1.pdf
- Andrea Bosch, R. R. Interactive Radio Instruction: An Update from the Field. Retrieved June 4, 2014, from http://www.ictinedtoolkit.org/usere/library/tech_for_ed_chapters/09.pdf
- Are You Talking to Me? : Interactive Radio Instruction. (1999). TechKnowLogia, 1(2). Retrieved August 21, 2015
- Bandyopadhyay, P. K. (2007). The Struggle for Community Radio in India. Retrieved from AIR: http://allindiaradio.gov.in/Default.aspx
- Bhandigadi, P. Impact of EDUSAT on School Students and Teachers. Retrieved October 11, 2015, from http://pcf4.dec.uwi.edu/viewpaper.php?id=357&print=1
- Castro, C. D. (1999). Education in the Information Age: Promises and Frustrations. TechKnowLogia, 1(2). Retrieved August 21, 2015
- Das, J. K. Educational Broadcast through Radio. Retrieved October 5, 2015, from http://www.aiaer.net/ejournal/vol19107/8.htm
- Dhand, D. Radio Teaching and Learning English Language. Retrieved July 25, 2014, from http://deepikadhandblog.wordpress.com/2015/01/07/radio-teaching-and-
- Dutta, S. (2011). Social Responsibility of Media and Indian Democracy. Global Media Journal. Retrieved October 14, 2015
- Dwivedi, R. (2010). Radio: History, Growth, Challenges and Current Status of it with Special Reference to India. Hamburg: University of Hamburg and Hans Bedew Research Foundation. Retrieved from http://works.bepress.com/ratnesh_dwivedi/10
- Evan, A. (2013). 6 World War-II Propaganda Broadcasters. History.com. Retrieved October 3, 2015, from http://www.history.com/news/history-lists/6-world-war-ii-propaganda-broadcasters
- Flicke, W. The Beginnings of Radio Intercept in World War-I. Retrieved October 2, 2015, from

http://www.nsa.gov/publicinfo/files/cryptologic_spectrum/beginnings_radio-intercept.pdf

- Ganesh, S. Changing Scenario in Broadcasting in India. Retrieved October 17, 2015, from http://rthk.hk/mediadigest/20100211_76_122554.html
- Garg, R. G. A Satellite EDUSAT: Changing the State of Education in India. Retrieved October 16, 2015, from http://inc.mit.edu/linc2013/proceedings/Session9/Session9Garg.pdf
- Goralski, R. S. (1960). Radio Broadcasting in Asia and the Voice of America. Studies on Asia, 1(1).
- Grant, J. (1907). Experiments and Results in Wireless Telegraphy. American Telephone Journal. Retrieved October 8, 2015, from http://earlyradiohistory.us/1907fes.htm
- Hameed, Y. M. (2014). Role of Radio in Imparting Education at Allama Iqbal Open University Pakistan and Al-Qudus Open University Jordan. Asian Journal of Social Science and Humanities, 3(1).
- ICT in School Education (Primary and Secondary). Information and Communication
- Technology for Education in India. (2010). Retrieved June 10, 2014, from https://www.infodev.org/infodev-files/resource/InfodevDocuments_1016.pdf
- Jha, S. B. (2013). Interactive Radio/Audio Interventions in Elementary Schools in Karnataka, India: A Policy Simulation Exercise.
- Joseph E Baudino, J. M. (1997). Broadcasting's Oldest Stations: An Examination of Four Claimants. Journal of Broadcasting. Retrieved October 2, 2015
- Kamat, P. (2015, October 7). Essay on Prasar Bharathi (Broadcasting Corporation of India). Retrieved from http://www.preserveaticles.com/2012011821089/eassy-on-prasar-bharathi-broadcasting-corporation-of-india,html
- Karthik, P. Essay on the Brief History of Radio Broadcasting in India. Retrieved September 29, 2015, from

http://www.preservearticles.com/2011112417838/eassy-on-the-brief-history-of-radio=broadcasting-in-india.html

- Kurrien, Z. (2008). The Use Educational Radio for Improving the Quality of Teaching and Learning in Government Regional Medium Elementary Schools. Retrieved June 10, 2015, from http://www.itforchange.net/sites/default/files/ITfC/The_useof_eduradio_for_impro_the_quality_ofelesch_by_ZakiyaKurrien.pdf
- Loiglio, J. (2004, December). Radio in Wartime: The Politics of Propaganda, Race and The American Why in the Second World War. American Quarterly, 56.
- Lule, J. (2012). Evolution of Radio Broadcasting. In Understanding Media and Culture: An Introduction to Mass Communication (Vol. 1.0). Retrieved October 7, 2015, from http://catalog.flatworldknowledge.com/bookhub/reader/3833?e=lulemedia_1.0-ch07_s01
- Lule, J. Understanding Media and Culture: An Introduction to Mass Communication. Retrieved October 9, 2015, from http://catalog.flatwprld.knowledge.com/bookhub/readear/3833?e=lulemedia-1.0-ch07_S03
- Marconi, G. American Experience: People and Events. Retrieved October 7, 2015, from http://www.pbs.org/wgbh/amex/rescue/peopleevents/pandeAMEX98.html
- Media, U. C. Community Radio Continuous Improvement Toolkit Version 1.0. Hyderabad: University of Hyderabad. Retrieved October 20, 2015, from http://cema.org.in/ckfinder/userfiles/files/CR_CIT%201_0%20June%2013,%202013_v1.pdf
- Mohammad Reza Nazari, A. H. (2010). Radio as an Educational Media: Impact on Agricultural Development. The Journal of the South East Asia Research Centre for Communication and Humanities, 2.
- Nambiar, A. (2010). Interactive Radio Instruction (IRI) Improves Indian Student Learning. ICT Tools for South Asia. Retrieved June 8, 2014, from

http://edutechdebate.org/ict-tools-for-south-asia/interactive-radio-instruction-iri-improves-indian-student-learning/

- Nanda, S. Communicative English through Media: A Case Study. Retrieved October 19, 2015, from http://wikieducator.org/images/c/c0/PID_719.pdf
- Osunkunle, O. O. Using Radio as a Tool for Rural Development in Limpopo Province of South Africa: An Evaluation of Case Studies. Journalist. Retrieved October 15, 2015, from ejournalist.com.au
- Pallavi, P. (2013). Education and Satellite Communication (EDUSAT) in India. Journal of Education and Research for Sustainable Development, 1(1).
- Parankimalil, J. (2012). Meaning, Nature and Aims of Education. Word press. Retrieved July 9, 2014, from http://Johnparankimalil.wordpress.com/2012/03/26/meaning-nature-and-aims-of-education/
- Pavrala, V. (2006). Breaking Free: Battle over the Reweaves. Retrieved October 15, 2015, from http://osdir.com/ml/telecom.india
- Praun, L. -G. German Radio Intelligence. Retrieved September 20, 2105, from http://www.allworldwars.com/German-Radio-Intelligence-by-Albert-Praun.html
- R.C., S. (2009). Interactive Radio Counselling in Distance Education. Retrieved June 3, 2015, from http://www.slideshare.net/rc_sharma/interaction-radio-counselling-in-distance-education
- Ramon almeries. (2015). Interactive Radio Instruction. Retrieved September 29, 2015, from http://corolinehou.wordpress.com/2010/10/17/interactive=-radio-instruction-iri-improves-indian-student-learning/
- Resources, C. f. (2005). CLR Action Research Project in Improving the English

- Language Communication Skills of Disadvantaged Rural and Urban Students in Middle Schools of Pune District Interactive Radio Instruction. Pune.
- Robert Gurevich, S. L. (2010). Technology Tools for Teaching and Training (T4) Evaluation. USAID, India.
- Sadath, K. A. (2010). IT School Project: Successfully Educating Kerala with ICT. ICT Tools for South Asia. Retrieved June 10, 2014, from http://edutechdebate.org/ict-tools-for-south-asia/itschool-project-sucessfully-educating-kerala-with-ict/
- Saikia, J. (2014). Uses of Radio for Teaching English to Sadri Students of Upper Primary Schools in Assam. Language in India, 14(9).
- Sarma, A. The Impact of Interactive Radio Instruction Programme "English is Fun" on the Quality of Primary School Leaners of Jaipur City. Retrieved September 4, 2014, from http://research.iisuniv.ac.in/sites/research/files/rpp/pdf_arts/Aparna%20Sarma_arts.pdf
- Scheldt, S. (1996). Public Radio- A Short History. Christian Science Monitor Publishing Company. Retrieved from http://www.wsvh.org/pubradiohist.htm
- Seth, A. The Community Radio Movement in India. New Delhi. Retrieved October 20, 2015, from http://www.gramvaani.org/wp-content/uploads/2013/05/community-radio-indian-history.pdf
- Sharma, R. (2003). Gnanvani: The Educational FM Radio Network of India.
- International Review of Research in Open and Distance Learning, 2(2). Retrieved June 10, 2014, from http://www.irrodl.org/content/v2.2/field.html
- Sharma, U. C. (2003). Bridges to Effective Learning through Radio. The International Review of Research in Open and Distributed Learning, 4(1). Retrieved August 24, 2015, from http://www.irrodl.org/index.php/irrodl/article/view/118/198

- Spiker, J. The Development of Radio (Vol. 1). USA: University of Akron. Retrieved October 5, 2015, from http://www.eloss.net/eolss-sample.html
- Venkatalakshmi, K. (2013). A Study on Social Imitative Activities given by FM
  Radio Stations. International Journal of Innovative Research and Development, 2(5).
- Wyman, L. Radio History. Retrieved September 29, 2015, from http://www.personal.pu.edu/jtk187/art2/radio.htm